**<u>1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.</u>**

**<u>ಎಸ್.ಸಿ. ಸಂಖ್ಯೆ: 68/2017</u>**

**<u>ಪಿರ್ಯಾದುದಾರರು</u>** ಃ ಮಾಗಡಿ ಪೊಲೀಸ್ ಠಾಣೆ

**<u>ವಿರುದ್ಧ</u>**

**<u>ಆರೋಪಿ</u>**ಃ

1. ಮೊಹಮದ್ ವಾಸಿಲ್ ಉಃ ವಾಸಿಲ್ ಬಿನ್ ಅಬ್ದುಲ್ ಶುಕೂರ್, 42 ವರ್ಷ, ವಾಸಃ ಸುಣಕಲ್ ಬೀದಿ, ಹೊಸಮಸೀದಿ ಮೊಹಲ್ಲಾ, ಮಾಗಡಿ ಟೌನ್, ರಾಮನಗರ ಜಿಲ್ಲೆ.

2. ನಸೀಂ ತಾಜ್ ಉಃ ನಸೀಮಾ ಕೋಂ.ಸಲೀಂ ಪಾಷ. (abated)

3. ರಾಶೀದ್ ಉನ್ನಿಸಾ ಉಃ ರಾಶೀದಾ ಕೊಂ.ಅಬ್ದುಲ್ ರಶೀದ್, 35 ವರ್ಷ, ವಾಸಃ ನಂ.13/16, 10ನೇ ಮೈನ್, 17ನೇ ಅಡ್ಡರಸ್ತೆ, ಗೋರಿಪಾಳ್ಯ, ಜಗಜೀವನ್ ರಾಮ್ ನಗರ, ಬೆಂಗಳೂರು.

4. ಮೊಹಮ್ಮದ್ ರಫಿ ಬಿನ್ ಅಬ್ದುಲ್ ಶುಕೂರ್. (abated)

*******

**<u>ದಂಡ ಪ್ರಕ್ರಿಯೆ ಸಂಹಿತೆ ಕಲಂ 313ರಡಿಯಲ್ಲಿ ಆರೋಪಿ ಹೇಳಿಕೆ</u>**

**<u>ಪ್ರಶ್ನೆ 1.</u>** ಅಭಿಯೋಜನೆಯ ಪರ ಸಾಕ್ಷಿ ವಿಚಾರಣೆ ಕೇಳಿದ್ದೀರಾ?

ಉತ್ತರ:_

**<u>ಪ್ರಶ್ನೆ 2.</u>** ಪ್ರಾ.ಸಾ.1 ಮಹಮ್ಮದ್ ನೂರೂಲ್ಲಾ ರವರು ತಮ್ಮ ನುಡಿ ಸಾಕ್ಷ್ಯದಲ್ಲಿ, ಮೃತ ಆಯಿಷಾ ನನ್ನ ಮಗಳು, ಅವಳು ಮೃತಪಟ್ಟಾಗ ಅವಳ ವಯಸ್ಸು ಒಂಬತ್ತುವರೆ ವರ್ಷ, ಅವಳು 4ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಳು, ಆರೋಪಿಗಳು ಗೊತ್ತು ನಮ್ಮ ಮನೆ ಎದುರಿನಲ್ಲಿ ವಾಸವಾಗಿದ್ದಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**<u>ಪ್ರಶ್ನೆ 3.</u>** ಪ್ರಾ.ಸಾ.1 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ದಿನಾಂಕ 01.03.2017 ರಂದು ರಾತ್ರಿ 9 ಗಂಟೆ ಸಮಯದಲ್ಲಿ ನನ್ನ ಮಗಳು ಮನೆಯ ಬೀಗ ತೆಗೆದುಕೊಂಡು ಹೋಗಿ ನನ್ನ ಹೆಂಡತಿಗೆ ಕೊಟ್ಟು, ಬರುತ್ತೇನಮ್ಮ ಎಂದು ಹೇಳಿ ಹೋದವಳು ಬರಲಿಲ್ಲ, ಆ ಸಮಯದಲ್ಲಿ ನಾನು ಜಮೀರ್ ಎನ್ನುವವರ ಮನೆಗೆ ಹೋಗಿದ್ದೆ, ಆ ಮೇಲೆ ನಾನು ವಾಪಸ್ಸು ರಾತ್ರಿ 9.30 ಗಂಟೆಗೆ ಮನೆಗೆ ಬಂದು ನೋಡಿದಾಗ ನನ್ನ ಮಗಳು ಆಯಿಷಾ ಮನೆಯಲ್ಲಿ ಇರಲಿಲ್ಲ, ಅವಳನ್ನು ಎಲ್ಲ ಕಡೆ ಹುಡಿಕಾಡಿದೆ ಸಿಗಲಿಲ್ಲ, 1ನೇ ಆರೋಪಿಯ ಅಣ್ಣನ ಮಗ ಶಾಬಜ್ ಕಲಂದರ್ ನಮ್ಮ ಮನೆಯಲ್ಲಿದ್ದ, ರಾತ್ರಿ 11 ಗಂಟೆವರೆಗೆ ಹುಡುಕಿ ನಂತರ ಪೊಲೀಸ್ ಠಾಣೆಗೆ ಹೋದೆವು, ಪೊಲೀಸರು ಮತ್ತೇ ಹುಡುಕಲು ಹೇಳಿದರು, 2ನೇ ತಾರೀಖಿನವರೆಗೂ ಹುಡುಕಿ, ನಮ್ಮ ಮಗು ಕಾಣೆಯಾಗಿದ್ದಾಳೆ ಎಂದು ನಿಶಾನೆ ಪಿ 1 ದೂರು ನೀಡಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**<u>ಪ್ರಶ್ನೆ 4.</u>** ಪ್ರಾ.ಸಾ.1 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ನಂತರ ದಿನಾಂಕ 03.03.2017 ರಂದು ಶುಕ್ರವಾರ ನಾವು ನಾಮಾಜ್‌ಗೆ ಹೋಗಿ ಬಂದಾಗ ಆಸಿಫ್ ಖಾನ್ ಎನ್ನುವವರು ಹೊಸಹಳ್ಳಿಯ ಸಕ್ಕೂರು ಆಸ್ಥಾನದ ಹಿಂಭಾಗದಲ್ಲಿ ಒಂದು ಹೆಣ್ಣು ಮಗುವಿನ ಮೃತದೇಹ ಬಿದಿದ್ದೆ ಎಂದು ತಿಳಿಸಿದ್ದು, ಆ ಮೇರೆಗೆ ನಾನು 3.15 ಗಂಟೆ ನಾವು ಅಲ್ಲಿಗೆ ಹೋಗಿ ನೋಡಿದಾಗ ಆ ಮೃತ ದೇಹ ನನ್ನ ಮಗಳದಾಗಿತ್ತು, ಆ ಮೃತದೇಹ ಗುರುತು ಹಿಡಿಯದಷ್ಟು ವಿಕಾರ ಆಗಿತ್ತು, ಬಟ್ಟೆ ನೋಡಿ ಗುರುತಿಸಿದೆವು, ಕುತ್ತಿಗೆಗೆ ಟೇಪ್ ನಿಂದ ಬಿಗಿದಿದ್ದು, ಬಾಯಿಗೆ ಪ್ಲಾಸ್ಟಿಕ್ ಎಲ್ಲಾ ತುಂಬಿದ್ದು, ಕೈಗೆಲ್ಲಾ ಏನೋನೋ ಮಾಡಿದ್ದರು, ಪೊಲೀಸರು ಸ್ಥಳಕ್ಕೆ ಬಂದಿದ್ದು, ಸ್ಥಳದಲ್ಲಿಯೇ ನಾನು ನಿಶಾನೆ ಪಿ 2 ದೂರು ನೀಡಿದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**<u>ಪ್ರಶ್ನೆ 5.</u>** ಪ್ರಾ.ಸಾ.1 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ದಿನಾಂಕ 02.03.2017 ರಂದು ಬೆಳಿಗ್ಗೆ 10.45 ಗಂಟೆ ಸಮಯಕ್ಕೆ ಪೊಲೀಸರು ನಮ್ಮ ಮನೆಯ ಬಳಿ ಬಂದು ಸ್ಥಳ ಪರಿಶೀಲಿಸಿ, ನಿಶಾನೆ ಪಿ 5 ಪಂಚನಾಮೆಯನ್ನು ಮಾಡಿ ನಮ್ಮ ಸಹಿ ಪಡೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**ಪ್ರಶ್ನೆ 6.** ಪ್ರಾ.ಸಾ.1 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ನನ್ನ ಮಗಳು ಕೊನೇಯದಾಗಿ ಹಾಕಿಕೊಂಡಿದ್ದ ಬಟ್ಟೆಗಳು ಮುದ್ದೆಮಾಲು 1 ರಿಂದ 8 ಅಗಿರುತ್ತವೆ ಎಂದು ಅವು ತನ್ನ ಮಗಳದ್ದೇ ಎಂದು ಗುರುತಿಸಿದ್ದು, ನಿಶಾನೆ ಪಿ 6 ರಿಂದ 8 ನನ್ನ ಮಗಳ ಭಾವಚಿತ್ರ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**ಪ್ರಶ್ನೆ 7.** ಪ್ರಾ.ಸಾ.1 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, 1 ಮತ್ತು 4ನೇ ಆರೋಪಿತರು ಅಣ್ಣತಮ್ಮಂದಿರು, 4ನೇ ಆರೋಪಿಗೆ 1 ವರ್ಷದಿಂದ ಪಾರ್ಶ್ವ ವಾಯು ಉಂಟಾಗಿತ್ತು, ಆರೋಪಿಗಳು ನನ್ನ ಮಗಳನ್ನು ಎತ್ತಿಕೊಂಡು ಹೋಗಿ ವಾಮಾಚಾರಕ್ಕೆ ಒಳಪಡಿಸಿ ಹತ್ಯೆ ಮಾಡಿರುತ್ತಾರೆ, ಆರೋಪಿಗಳು 4ನೇ ಆರೋಪಿ ಸರಿ ಹೋಗುತ್ತಾನೆಂಬ ಕಾರಣಕ್ಕೆ ನನ್ನ ಮಗಳನ್ನು ಬಲಿ ನೀಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**ಪ್ರಶ್ನೆ 8.** ಪ್ರಾ.ಸಾ.5 ಜಮೀಲ ರವರು ತಮ್ಮ ನುಡಿ ಸಾಕ್ಷ್ಯದಲ್ಲಿ, ಮೃತ ಆಯೀಷಾ ನನ್ನ ಮಗಳು, 1ರಿಂದ 4ನೇ ಆರೋಪಿಗಳು ನನಗೆ ಗೊತ್ತು, 2 ಮತ್ತು 3ನೇ ಆರೋಪಿಗಳು 4ನೇ ಆರೋಪಿಗೆ ಅಣ್ಣ ಮತ್ತು ತಂಗಿ, 1ನೇ ಆರೋಪಿಗೆ 4ನೇ ಆರೋಪಿ ದೊಡ್ಡಣ್ಣ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**<u>ಪ್ರಶ್ನೆ 9.</u>** ಪ್ರಾ.ಸಾ.5 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, 2ನೇ ಆರೋಪಿ ಪೂಜೆ ಮಾಡುವ ಕೆಲಸ ಮಾಡುತ್ತಾರೆ, ದಿನಾಂಕ 01.03.2017 ರಂದು ರಾತ್ರಿ 9.00 ಗಂಟೆಗೆ ನನ್ನ ಮಗಳನ್ನು ಅಪಹರಣ ಮಾಡಿದ್ದು, ಆಗ ನಾನು ಅಂಗಡಿಯಲ್ಲಿದ್ದೆ, ನನ್ನ ಮಗಳು ಮನೆಯ ಕೀ ಕೊಟ್ಟು ಆಟವಾಡುತ್ತೇನೆಂದು ಹೋದಳು, ನಂತರ ನಾನು ರಾತ್ರಿ 9.30 ಕ್ಕೆ ಮನೆಗೆ ಬಂದಾಗ ಮಗಳು ಮನೆಯಲ್ಲಿ ಇರಲಿಲ್ಲ ಮತ್ತು ಹುಡುಕಾಡಿದರೂ ಸಿಗಲಿಲ್ಲ, ನಂತರ 2ನೇ ತಾರೀಖಿನಂದು ಪೊಲೀಸ್ ಠಾಣೆಯಲ್ಲಿ ದೂರು ನೀಡಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**<u>ಪ್ರಶ್ನೆ 10.</u>** ಪ್ರಾ.ಸಾ.5 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ನಂತರ 3ನೇ ತಾರೀಖಿನಂದು ಸಂಜೆ 4.00 ಗಂಟೆಗೆ ನನ್ನ ಮಗಳ ಮೃತದೇಹ ಹೊಸಹಳ್ಳಿಯ 1ನೇ ಆರೋಪಿಯ ಮನೆಯ ಬಳಿ ಸ್ಮಶಾನದಂತೆ ಇದ್ದು ಅಲ್ಲಿ ಇದೆ ಎಂದು ತಿಳಿಯಿತು, ಕೂಡಲೇ ನಾವು ಸ್ಥಳಕ್ಕೆ ಹೋಗಿ ನನ್ನ ಮಗಳ ಬಟ್ಟೆ ನೋಡಿ ಗುರುತಿಸಿದೆವು, ಅದು ನನ್ನ ಮಗಳ ದೇಹವೇ ಆಗಿತ್ತು, ಆಕೆಯ ಕಣ್ಣುಗುಡ್ಡೆ ಹೊರಗೆ ಬಂದಿತ್ತು, ಮುಖ ಎಲ್ಲಾ ಅಲ್ಲಲ್ಲಿ ಸುಟ್ಟಿದ್ದು, ಕೈಯ್ಯಲ್ಲಿನ ಉಗುರು ಕಿತ್ತು ಹಾಕಿದ್ದು, ಬಾಯಿಗೆ ಬಟ್ಟೆ ತುರುಕಿದ್ದರು, ಆಕೆಯ ಕಾಲ ಭಾಗದಲ್ಲಿ ಚೀಲ ಹಾಕಿದ್ದರು, ಕತ್ತಿಗೆ ತಲೆಗೆ ಕಟ್ಟಿಕೊಳ್ಳುವ ರಿಬ್ಬನ್ ಕಟ್ಟಿದ್ದರು, ನಂತರ

ಮೃತದೇಹವನ್ನು ರಾಜರಾಜೇಶ್ವರಿ ಆಸ್ಪತ್ರೆಗೆ ಪೊಲೀಸರು ತೆಗೆದುಕೊಂಡು ಹೋದರು, ಈ ಎಲ್ಲಾ ವಿಷಯಗಳನ್ನು ನಾನು ಪೊಲೀಸರಿಗೆ ಆಸ್ಪತ್ರೆಯಲ್ಲಿ ಹೇಳಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**ಪ್ರಶ್ನೆ 11.** ಪ್ರಾ.ಸಾ.5 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ನಾನು ನನ್ನ ಮಗಳು ಕೊನೇಯದಾಗಿ ಹಾಕಿಕೊಂಡು ಹೋಗಿದ್ದ ಬಟ್ಟೆಗಳು ಮುದ್ದೆಮಾಲು 1 ರಿಂದ 8 ಆಗಿರುತ್ತವೆ ಎಂದು ಗುರುತಿಸಿದ್ದು, ನನ್ನ ಮಗಳನ್ನು 4ನೇ ಆರೋಪಿಗೆ ಪಾರ್ಶ್ವ ವಾಯುವಾಗಿದ್ದು ಅವರಿಗೆ ಸರಿ ಹೋಗಲು ಬಲಿ ಕೊಡಬೇಕೆಂದು ಮಂತ್ರವಾದಿ ಹೇಳಿದ್ದು, ಅದರಂತೆ ಇತರೆ ಆರೋಪಿಗಳು ನನ್ನ ಮಗಳನ್ನು ಎತ್ತಿಕೊಂಡು ಹೋಗಿ ಹತ್ಯೆ ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**ಪ್ರಶ್ನೆ 12.** ಪ್ರಾ.ಸಾ.6 ಬಶೀರ್ ಅಹಮ್ಮದ್ ರವರು ತಮ್ಮ ನುಡಿ ಸಾಕ್ಷ್ಯದಲ್ಲಿ, ಮೃತ ಆಯೀಷಾ ನನಗೆ ಗೊತ್ತು, ಆಕೆ ಚಾಸಾ.1 ಮತ್ತು 9 ರವರ ಮಗಳು, ಆಕೆ ಮೃತಪಟ್ಟಿರುತ್ತಾಳೆ, ದಿನಾಂಕ 03.03.2017 ರಂದು ಶುಕೂರ್ ಸಾಹೇಬರಿಗೆ ಸೇರಿದ

ಹೊಸಹಳ್ಳಿ ಗ್ರಾಮದ ಆಸ್ತಾನ ಆಶ್ರಮದಲ್ಲಿ ಸ್ವಾಮೀಜಿ ಇದ್ದು, ಅಲ್ಲಿ ಮೃತ ಆಯೀಷಾ ದೇಹ ಇತ್ತು, ಅಲ್ಲಿ ಅವರು ಕಾರ್ಯಕ್ರಮಗಳನ್ನು ಮಾಡುತ್ತಿದ್ದರು, ಅನಂತರ ನಾನು ರಾಜರಾಜೇಶ್ವರಿ ಆಸ್ಪತ್ರೆಯಲ್ಲಿ ರಾತ್ರಿ 9.00 ಗಂಟೆ ಸಮಯದಲ್ಲಿ ಮೃತದೇಹವನ್ನು ನೋಡಿದ್ದು, ನನ್ನೊಂದಿಗೆ ಚಾಸಾ.7 ಸಹ ಇದ್ದರು, ಮೃತದೇಹ ನೋಡಿ ಪೊಲೀಸರು ಸ್ಥಳದಲ್ಲಿಯೇ ನಿಶಾನೆ ಪಿ 9 ಶವ ಪಂಚನಮೆಯನ್ನು ಬರೆದಿದ್ದು, ಮೃತದೇಹಕ್ಕೆ ಕಣ್ಣುಗುಡ್ಡೆ ಕಿತ್ತಿದ್ದರು, ಎರಡು ಭುಜದ ಕೆಳಭಾಗ, ಹೊಟ್ಟೆಯ ಕೆಳಭಾಗ ಚುಚ್ಚಿದ ಗಾಯಗಳಾಗಿತ್ತು, ಕತ್ತಿನ ಮುಂಭಾಗ ಕೂದಲಿನ ರಿಬ್ಬನ್‌ನಿಂದ ಗುರುತು ಆಗಿತ್ತು, ನಿಶಾನೆ ಪಿ 7 ಮತ್ತು 8 ಮೃತಳ ದೇಹದ ಭಾವಚಿತ್ರ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**<u>ಪ್ರಶ್ನೆ 13.</u>** ಪ್ರಾ.ಸಾ.7 ರೇಷ್ಮಾ ತಾಜ್ ರವರು ತಮ್ಮ ನುಡಿ ಸಾಕ್ಷ್ಯದಲ್ಲಿ, ಚಾಸಾ.1 ನನ್ನ ಅಣ್ಣ, ಚಾಸಾ.9 ನನ್ನ ಅತ್ತಿಗೆ, ಚಾಸಾ 18 ಮತ್ತು 19 ನನ್ನ ನೆರೆಯವರು, ನನಗೆ ನ್ಯಾಯಾಲಯದ ಮುಂದಿರುವ ಆರೋಪಿಗಳು ಗೊತ್ತು, ನನಗೆ ಮೃತ ಬಿಬಿ ಆಯೇಷಾ ಗೊತ್ತು, ಆಕೆ ನನ್ನ ಅಣ್ಣನ ಮಗಳು ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**ಪ್ರಶ್ನೆ 14.** ಪ್ರಾ.ಸಾ.7 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ದಿನಾಂಕ 01.03.2017 ರಂದು ರಾತ್ರಿ 9.30 ಕ್ಕೆ ನನ್ನ ಅಣ್ಣನ ಮಗಳು ಬಿಬಿ ಆಯೇಷಾ ಕಾಣೆಯಾಗಿದ್ದು, ನಂತರ ನಾವು ಸುಮಾರು 40-50 ಜನ ಸೇರಿ ಆಕೆಯನ್ನು ಮನೆಗಳಲ್ಲಿ ಹುಡುಕಿದೆವು, ಆದರೆ ಆಕೆ ಸಿಗಲಿಲ್ಲ, ಆನಂತರ ದಿನಾಂಕ 02.03.2017 ರಂದು ನನ್ನ ಅಣ್ಣನ ಜೊತೆ ನಾವುಗಳೆಲ್ಲರೂ ಹೋಗಿ ಠಾಣೆಯಲ್ಲಿ ದೂರು ನೀಡಿದೆವು ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**ಪ್ರಶ್ನೆ 15.** ಪ್ರಾ.ಸಾ.7 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ನಾವು ದೂರನ್ನು ಬರೆಸುವ ಸಮಯದಲ್ಲಿ ಬೆಳಿಗ್ಗೆ 10.30/11.00 ಗಂಟೆಯಲ್ಲಿ 1ನೇ ಆರೋಪಿ ನನಗೆ ದೂರವಾಣಿ ಕರೆ ಮಾಡಿ ಮಾತನಾಡಬೇಕು ಬಾ ಎಂದು ಕರೆದರು, ನಾವು ಠಾಣೆಯಲ್ಲಿ ದೂರನ್ನು ದಾಖಲಿಸಿ ನಂತರ ಸುಮಾರು 12.00/12.30 ಗಂಟೆ ಸಮಯಕ್ಕೆ 1ನೇ ಆರೋಪಿಯ ಮನೆಗೆ ನಾನು, ಶಬಾನಾ, ನಾಜ್ಮಿ ತಾಜ್ ಮತ್ತು ಇತರೆ ನಮ್ಮ ಸಂಘದವರು ಹೋದೆವು, ಅವರ ಮನೆಯಲ್ಲಿ 2, 3ನೇ ಆರೋಪಿಗಳು ಮತ್ತು ಶಾಬಾಜ್ ಖಲಂದರ್, ಅವರ ಹೆಂಡತಿ ಮಕ್ಕಳು ಮತ್ತು 4ನೇ ಆರೋಪಿ ಸಹ ಇದ್ದರು, 4ನೇ ಆರೋಪಿಗೆ ಪಾರ್ಶ್ವ ವಾಯು ಆಗಿತ್ತು, 2ನೇ ಆರೋಪಿ ಪರಿಚಯವಿರಲಿಲ್ಲ, ಅವರು ಯಾರು ಎಂದು 1ನೇ ಆರೋಪಿಯನ್ನು ಕೇಳಿದೆ, ಆಗ 1ನೇ ಆರೋಪಿ ನನ್ನ ಅಣ್ಣನ ಮಗು ಕರೆಸಲು ಕರೆದಿದ್ದೆ,

ಅವರು ಮಾಟ-ಮಂತ್ರ ಮಾಡುತ್ತಾರೆ ಎಂದು ಹೇಳಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**<u>ಪ್ರಶ್ನೆ 16.</u>** ಪ್ರಾ.ಸಾ.7 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ನಾನು 2ನೇ ಆರೋಪಿಯನ್ನು ನನ್ನ ಅಣ್ಣನ ಮಗಳ ಬಗ್ಗೆ ವಿಚಾರಿಸಿದೆ, ಆಗ ಆಕೆಯನ್ನು ಯಾರೋ 4 ಜನ ಕರೆದುಕೊಂಡು ಹೋಗಿ ರೇಪ್ ಮಾಡಿರುತ್ತಾರೆ, ಆಕೆ ಬರುತ್ತಾಳೆ, ನೀವು ಟೆನ್ಷನ್ ತೆಗೆದುಕೊಳ್ಳಬೇಡಿ ಎಂದು ಹೇಳಿ, ನನ್ನ ಅಣ್ಣನ ಮಗಳ ಬಟ್ಟೆ ಕೇಳಿದ್ದು ನಾವು ನೀಡಿದ ನಂತರ ಬಟ್ಟೆಯಲ್ಲಿ ಏನೋ ಹಾಕಿ ಸುತ್ತಿದ್ದು ಅದನ್ನು ನನ್ನ ಅಣ್ಣನ ಮನೆಯಲ್ಲಿ ಸಜ್ಜೆಯ ಮೇಲೆ ಇಟ್ಟರು, ಅದರಲ್ಲಿ ಏನಿತ್ತು ಎಂದು ನಾನು ನೋಡಲಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**<u>ಪ್ರಶ್ನೆ 17.</u>** ಪ್ರಾ.ಸಾ.7 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ನಂತರ ದಿನಾಂಕ 03.03.2017 ರಂದು ಮಧ್ಯಾಹ್ನ 3.30 ಕ್ಕೆ ಹಸು, ಮೇಕೆ ಮೇಯಿಸುವವರು ನಮ್ಮ ಪಕ್ಕದ ಮನೆಯವರಿಗೆ ಮಗು ಸಿಕ್ಕಿದೆ ಎಂದು ಹೇಳಿದ್ದು, ನಾವು ಕೂಡಲೇ ಹೊಸಹಳ್ಳಿಯ 1ನೇ ಆರೋಪಿಯ ತಂದೆಯ ಜಮೀನಿನಲ್ಲಿ ಹೋಗಿ ನೋಡಿದಾಗ ಆ ಮಗುವಿನ ಚಪ್ಪಲಿ, ಸೆಂಟ್ ಬಾಟಲ್, ಚಿಕ್ಕ ಕಪ್ಪು ಬಳೆಗಳು, ಹೂ, ನವಧಾನ್ಯ, ಬಟ್ಟೆ ಒಂದು ಕಡೆ ಬಿದ್ದಿದ್ದು,

ಮಗು ಮತ್ತೊಂದು ಕಡೆ ಇತ್ತು, ಮಗುವಿನ 2 ಕೈಗಳನ್ನು ಮಗುವಿನ ಬಟ್ಟೆಯಲ್ಲಿಯೇ ಹಿಂದಕ್ಕೆ ಕಟ್ಟಿದ್ದು, ಬಾಯಿಗೂ ಬಟ್ಟೆ ಕಟ್ಟಿದ್ದರು, ಮಗುವಿನ ಮುಖ ಅಲ್ಲಲ್ಲಿ ಸುಟ್ಟ ರೀತಿಯಲ್ಲಿ ಕಪ್ಪು ಬಣ್ಣ ಆಗಿತ್ತು, ಮಗುವಿನ ಉಗುರು ಸಹ ಇರಲಿಲ್ಲ, ಕೈ ಮುಖ ಎಲ್ಲವೂ ಊದಿಕೊಂಡಿತ್ತು, ಸೊಂಟದವರೆಗೂ ಬೀಡಿ ಎಲೆ ಚೀಲ ಹಾಕಿದ್ದರು, ಕಣ್ಣು ಗುಡ್ಡೆ ಹೊರಬಂದಿತ್ತು ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**ಪ್ರಶ್ನೆ 18.** ಪ್ರಾ.ಸಾ.7 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ದಿನಾಂಕ 08.03.2017 ರಂದು 2ನೇ ಆರೋಪಿ ಕೊಟ್ಟಿದ್ದ ನನ್ನ ಅಣ್ಣನ ಮಗಳ ಬಟ್ಟೆಯೊಂದಿಗಿನ ವಸ್ತುಗಳನ್ನು ಪೊಲೀಸ್ ಠಾಣೆಗೆ ತೆಗೆದುಕೊಂಡು ಹೋಗಿ ಕೊಟ್ಟೆವು, ಅದನ್ನು ತೆಗೆದು ನೋಡಿದಾಗ ಅದರಲ್ಲಿ ಮಗುವಿನ ಬಟ್ಟೆ, ನಿಂಬೆ ಹಣ್ಣು ಮತ್ತು ಬೀಗ ಇತ್ತು, ನಂತರ ಪೊಲೀಸರು ನಿಶಾನೆ ಪಿ 10 ಅಮಾನತ್ತು ಪಂಚನಾಮೆಯ ಮೂಲಕ ಅದನ್ನು ಮುದ್ದೆಮಾಲು 1 ರಿಂದ 12 ರಂತೆ ವಶಪಡಿಸಿಕೊಂಡು ನಮ್ಮ ಸಹಿ ಪಡೆದುಕೊಂಡರು ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**<u>ಪ್ರಶ್ನೆ 19.</u>** ಪ್ರಾ.ಸಾ.7 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, 4ನೇ ಆರೋಪಿಗೆ ಪಾರ್ಶ್ವ ವಾಯುವಾಗಿದ್ದು ಮಗುವನ್ನು ಬಲಿ ಕೊಟ್ಟರೆ ಅವರಿಗೆ ಸರಿ ಹೋಗುತ್ತದೆ ಎಂಬ ಕಾರಣಕ್ಕೆ ನಮ್ಮ ಮಗುವನ್ನು ಹತ್ಯೆ ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**<u>ಪ್ರಶ್ನೆ 20.</u>** ಪ್ರಾ.ಸಾ.8 ಮೊಹಮ್ಮದ್ ಬರ್ಕತ್ ರವರು ತಮ್ಮ ನುಡಿ ಸಾಕ್ಷ್ಯದಲ್ಲಿ, ದಿನಾಂಕ 08.03.2017 ರಂದು ಮಧ್ಯಾಹ್ನದ ಸಮಯದಲ್ಲಿ ಚಾಸಾ 16 ರವರು ಪೊಲೀಸ್ ಠಾಣೆಯಲ್ಲಿ ಮುದ್ದೆಮಾಲು 9 ರಿಂದ 12 ವಸ್ತುಗಳನ್ನು ನೀಡಿದ್ದು, ಅವುಗಳನ್ನು ನಿಶಾನೆ ಪಿ 10 ಪಂಚನಾಮೆಯ ಮೂಲಕ ವಶಪಡಿಸಿಕೊಂಡು ನನ್ನ ಸಹಿ ಪಡೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**<u>ಪ್ರಶ್ನೆ 21.</u>** ಪ್ರಾ.ಸಾ.9 ನಾಜ್ ನೀನ್ ತಾಜ್ ರವರು ತಮ್ಮ ನುಡಿ ಸಾಕ್ಷ್ಯದಲ್ಲಿ, ನನಗೆ ಚಾಸಾ.1, 16 ಮತ್ತು 19 ರವರು ಗೊತ್ತು, ನ್ಯಾಯಾಲಯದ ಮುಂದಿರುವ ಆರೋಪಿಗಳು ನನಗೆ ಗೊತ್ತು, ಮೃತ ಬಿಬಿ ಆಯೇಷಾ ಚಾಸಾ.1 ರವರ ಮಗಳು ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**ಪ್ರಶ್ನೆ 22.** ಪ್ರಾ.ಸಾ.9 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ದಿನಾಂಕ 01.03.2017 ರಂದು ನಾವು ಚಾಸಾ.16 ರವರ ಮನೆಯ ಬಳಿ ಇದ್ದಾಗ ಚಾಸಾ.1 ಅಲ್ಲಿಗೆ ಬಂದು ಬಿಬಿ ಆಯೇಷಾ ಬಂದಿದ್ದಾಳಾ ಎಂದು ಕೇಳಿದ್ದು, ಆಕೆಯನ್ನು ನಾವು ಎಲ್ಲರೂ ಸೇರಿ ಎಲ್ಲಾ ಕಡೆ ಹುಡುಕಿದರೂ ಸಿಗಲಿಲ್ಲ, ನಂತರ ಮಾರನೇ ದಿನ ದಿನಾಂಕ 02.03.2017 ರಂದು ಬೆಳಿಗ್ಗೆ 10 ಗಂಟೆಗೆ ನಾನು, ಚಾಸಾ 1, 16 ಮತ್ತು ಅಕ್ಕಪಕ್ಕದ ಮನೆಯ ಇತರೆಯವರು ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿದೆವು ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**ಪ್ರಶ್ನೆ 23.** ಪ್ರಾ.ಸಾ.9 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ಸುಮಾರು ಬೆಳಿಗ್ಗೆ 11.30/12.00 ಗಂಟೆ ಸಮಯದಲ್ಲಿ ದೂರು ನೀಡುತ್ತಿದ್ದಾಗ ಚಾಸಾ.16 ರವರಿಗೆ ಪದೇ ಪದೇ ಕರೆ ಮಾಡಿ ಮಾತನಾಡಬೇಕು ಮನೆ ಬಳಿ ಬಾ ಎಂದು 1ನೇ ಅರೋಪಿ ಕರೆದಿದ್ದು, ಮೃತ ಬಿಬಿ ಆಯೇಷಾಳ ಶಾಲೆಯ ಬಳಿ ಹೋಗಿ ಸ್ನೇಹಿತರ ಮನೆಗೆ ಹೋದ ಬಗ್ಗೆ ವಿಚಾರಿಸಿದೆವು, ಆನಂತರ 1ನೇ ಆರೋಪಿಯ ಮನೆಗೆ ಸುಮಾರು 12.00/12.30 ಸಮಯಕ್ಕೆ ನಾನು, ಚಾಸಾ.16 ಮತ್ತು ಇನ್ನೊಬ್ಬರು ಹೋಗಿದ್ದು, 1ನೇ ಆರೋಪಿಯ ಮನೆಯಲ್ಲಿ ಆತ ಮತ್ತು 2 ರಿಂದ 4ನೇ ಆರೋಪಿಗಳು ಇದ್ದರು ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**ಪ್ರಶ್ನೆ 24.** ಪ್ರಾ.ಸಾ.9 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ಆಗ ಮಾತನಾಡುತ್ತಾ 2ನೇ ಆರೋಪಿ ಆಯೇಷಾಳನ್ನು ಯಾರೋ 4 ಜನ ಕರೆದುಕೊಂಡು ಹೋಗಿರುತ್ತಾರೆ, ಮಾಟ-ಮಂತ್ರ ಮಾಡಿಸಿ ಮಗು ಬರುತ್ತದೆ ಎಂದು ಹೇಳಿದ್ದು, ನಂತರ ನಾವು 4ನೇ ಆರೋಪಿಗೆ ಪಾರ್ಶ್ವ ವಾಯುವಾಗಿರುವುದಕ್ಕೆ ಎಲ್ಲಾದರೂ ತೋರಿಸುವಂತೆ ಹೇಳಿದೆವು, ಅದಕ್ಕೆ ಆರೋಪಿಗಳು ಅದಕ್ಕೂ ಮಾಡಿದ್ದೇವೆ ಎಂದು ಹೇಳಿದ್ದು, 2ನೇ ಆರೋಪಿ ಮೃತ ಆಯೇಷಾಳ ಬಟ್ಟೆಯನ್ನು ನಮ್ಮ ಬಳಿ ಪಡೆದಿದ್ದು, ಯಾವುದೋ ವಸ್ತುಗಳನ್ನು ಹಾಕಿ ಚಾಸಾ.1 ರವರ ಮನೆಯ ಸಜ್ಜೆಯ ಮೇಲೆ ಇಡಲು ಕೊಟ್ಟಿದ್ದು, ನಾವು ಆಗ ಅದನ್ನು ತೆಗೆದು ನೋಡಿರಲಿಲ್ಲ, ನಂತರ ಪೊಲೀಸರು ಬಂದು ಅವರೇ ಅದನ್ನು ತೆಗೆದಿದ್ದು ನಿಂಬೆಹಣ್ಣು ಮತ್ತು ಬೀಗ ಇತ್ತು ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**ಪ್ರಶ್ನೆ 25.** ಪ್ರಾ.ಸಾ.9 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, 3 ದಿನಗಳಾದ ಮೇಲೆ 3.30 ರಿಂದ 4.00 ಗಂಟೆ ಸಮಯದಲ್ಲಿ ಯಾರೋ ಒಂದು ಮಗುವನ್ನು ಹೊಡೆದು ಹಾಕಿದ್ದಾರೆಂದು ತಿಳಿಯಿತು, ಕೂಡಲೇ ನಾವು ಹೊಸಹಳ್ಳಿ ಪಕ್ಕದಲ್ಲಿರುವ ರಸ್ತೆಯ ಪಕ್ಕದಲ್ಲಿ 1ನೇ ಆರೋಪಿಯವರ ಜಮೀನಿನಲ್ಲಿ ಹಳ್ಳದ ಬಳಿ ಒಂದು ಶೆಡ್ ಇದ್ದು, ಒಂದು ಮೃತದೇಹ ತೆಗೆದಿದ್ದು ಮುಖದ ಮೇಲೆಲ್ಲಾ ಗುರುತು ಮಾಡಿದ್ದು, ಕೂದಲಿಗೆ ಕಟ್ಟುವ ಟೇಪ್‌ನಿಂದ ಜೀರಿದ್ದು, ದೇಹದ ಮೇಲೆಲ್ಲಾ ಬರೆಗಳು ಮತ್ತು ಚುಚ್ಚಿದ

ಗುರುತುಗಳು ಇತ್ತು, ಮುಖದ ಮೇಲೆಲ್ಲಾ ಕೊಯ್ದಿದ್ದರು, ಪಾರ್ಶ್ವ ವಾಯು ಸರಿಪಡಿಸುವ ಉದ್ದೇಶಕ್ಕಾಗಿ ಆರೋಪಿಗಳು ಬಲಿ ಕೊಟ್ಟಿರುತ್ತಾರೆಂದು ತಿಳಿಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**<u>ಪ್ರಶ್ನೆ 26.</u>** ಪ್ರಾ.ಸಾ.10 ಸೈಯ್ಯದ್ ನಸ್ರುಲ್ಲಾ ರವರು ತಮ್ಮ ನುಡಿ ಸಾಕ್ಷ್ಯದಲ್ಲಿ, ಸುಮಾರು 3-4 ವರ್ಷಗಳ ಹಿಂದೆ ಸಂಜೆ 6 ರಿಂದ 7 ಗಂಟೆ ಸಮಯದಲ್ಲಿ ಪೊಲೀಸರು ನಮ್ಮನ್ನು ಗೋರಿಪಾಳ್ಯದ 2ನೇ ಆರೋಪಿ ಮನೆಗೆ ಕರೆದುಕೊಂಡು ಹೋಗಿ, ಅವರ ಮನೆಯಲ್ಲಿ ನಿಶಾನೆ ಪಿ 11 ಪಂಚನಾಮೆಯನ್ನು ಮಾಡಿ ನನ್ನ ಸಹಿ ಪಡೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**<u>ಪ್ರಶ್ನೆ 27.</u>** ಪ್ರಾ.ಸಾ.11 ಭಾಗ್ಯಮ್ಮ ರವರು ತಮ್ಮ ನುಡಿ ಸಾಕ್ಷ್ಯದಲ್ಲಿ, ನನ್ನ ಮನೆ ಮಾಗಡಿ ಪಟ್ಟಣದಲ್ಲಿನ ಮಸೀದಿಯ ಪಕ್ಕದಲ್ಲಿರುವ ಸುಣ್ಣಕಲ್ಲು ಬೀದಿಯಲ್ಲಿ ಇರುತ್ತದೆ, ನೂರುಲ್ಲಾ ಮಗಳು ಬಿಬಿ ಆಯೀಷಾ ನನಗೆ ಗೊತ್ತು, ಅವಳು ಮೃತಹೊಂದಿರುತ್ತಾಳೆ, ಈಗ ಸುಮಾರು 6 ವರ್ಷಗಳ ಹಿಂದೆ ರಾತ್ರಿ 9 ಗಂಟೆ ಸಮಯದಲ್ಲಿ ನಾನು ಮನೆಯ ಒಳಗೆ ಕುಳಿತಿದ್ದಾಗ ಹೊರಗೆ ಸದರಿ ಬಿಬಿ ಆಯೀಷಾ ಇವಳನ್ನು ನೋಡಿ ನಾಯಿ ಬೊಗಳುತ್ತಿದ್ದುದರಿಂದ, ನಾನು ಹೊರಗೆ ಬಂದು ನೋಡಿ, ನಾಯಿಯನ್ನು ನಾನು ಓಡಿಸಿ, ಅವಳಿಗೆ ಮನೆಗೆ ಹೋಗು

ಎಂದು ಹೇಳಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**ಪ್ರಶ್ನೆ 28.** ಪ್ರಾ.ಸಾ.12 ಚಂದ್ರಮ್ಮ ರವರು ತಮ್ಮ ನುಡಿ ಸಾಕ್ಷ್ಯದಲ್ಲಿ, ನನ್ನ ಮನೆ ಸುಣ್ಣಕಲ್ಲು ಬೀದಿಯಲ್ಲಿ ಇರುತ್ತದೆ, ನೂರುಲ್ಲಾ ಮಗಳು ಬಿಬಿ ಆಯೀಷಾ ನನಗೆ ಗೊತ್ತು, ಆಕೆ ಮೃತ ಹೊಂದಿರುತ್ತಾಳೆ, ಈಗ ಸುಮಾರು 6 ವರ್ಷಗಳ ಹಿಂದೆ ಒಂದು ದಿನ ಅಂದರೆ ಕಾಣೆಯಾದ ದಿನ ರಾತ್ರಿ ಸುಮಾರು 8.00-8.30 ರ ಸಮಯದಲ್ಲಿ ನಮ್ಮ ಮನೆಯ ಮುಂದೆ ಸ್ವಲ್ಪ ದೂರದಲ್ಲಿ ಬಿಬಿ ಆಯೀಷಾಳೊಂದಿಗೆ ಒಬ್ಬ ಹುಡುಗನ ಇರುವುದನ್ನು ನೋಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**ಪ್ರಶ್ನೆ 29.** ಪ್ರಾ.ಸಾ.13 ಜಗದೀಶ್ ಟಿ.ವಿ. ರವರು ತಮ್ಮ ನುಡಿ ಸಾಕ್ಷ್ಯದಲ್ಲಿ, ದಿನಾಂಕ 01.03.2017 ರಂದು ಮಧ್ಯಾಹ್ನ ಸುಮಾರು 2 – 2.30 ರ ಸಮಯದಲ್ಲಿ ಒಬ್ಬ ಮುಸ್ಲಿಂ ಯುವಕ ನಮ್ಮ ಬೇಕರಿಗೆ ಬಂದು 20 ರೂ. ಬೆಲೆಯುಳ್ಳ 2 ಡೈರಿ ಮಿಲ್ಕ್ ಚಾಕಲೇಟ್ ಗಳನ್ನು ಖರೀದಿಸಿಕೊಂಡು ಹೋಗಿದ್ದು, ಆತನು ಆಗಾಗ ನಮ್ಮ ಬೇಕರಿಗೆ ಬರುತ್ತಿದ್ದನು ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**<u>ಪ್ರಶ್ನೆ 30.</u>** ಪ್ರಾ.ಸಾ.13 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ದಿನಾಂಕ 03.03.2017 ರಂದು ಒಂದು ಮುಸ್ಲಿಂ ಹುಡುಗಿಯ ಕೊಲೆಯಾಗಿ ಅವಳ ದೇಹವನ್ನು ಹೊಸಹಳ್ಳಿ ರಸ್ತೆಯ ಪಕ್ಕದಲ್ಲಿ ಇರುವ ಹಳ್ಳದಲ್ಲಿ ಗೋಣಿ ಚೀಲದಲ್ಲಿ ಕಟ್ಟಿ ಹಾಕಿರುತ್ತಾರೆ ಎಂದು ತಿಳಿದ ತಕ್ಷಣ ನಾನು ಅಲ್ಲಿ ಹೋಗಿ ನೋಡಿದ್ದು, ದಿನಾಂಕ 05.03.2017 ರಂದು ಕೊಲೆ ಮಾಡಿದ ವ್ಯಕ್ತಿಗಳು ಸಿಕ್ಕಿರುತ್ತಾರೆ ಎಂದು ತಿಳಿದ ತಕ್ಷಣ ನಾನು ಪೊಲೀಸ್ ಠಾಣೆಗೆ ಹೋಗಿ ನೋಡಿದ್ದು, ಅವರಲ್ಲಿ ನಮ್ಮ ಅಂಗಡಿಯಿಂದ ಚಾಕಲೇಟ್ ಖರೀದಿಸಿಕೊಂಡ ಹೋದ ವ್ಯಕ್ತಿಯು ಸಹ ಇದ್ದು, ಪೊಲೀಸರು ನನ್ನ ವಿಚಾರಣೆ ಮಾಡಿ ನನ್ನ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**<u>ಪ್ರಶ್ನೆ 31.</u>** ಪ್ರಾ.ಸಾ.14 ಸಬಾ ಖೌಸರ್ ರವರು ತಮ್ಮ ನುಡಿ ಸಾಕ್ಷ್ಯದಲ್ಲಿ, 1ನೇ ಆರೋಪಿ ನನ್ನ ಮೈದುನ, 2ನೇ ಆರೋಪಿ ನನಗೆ ಗೊತ್ತು, 3ನೇ ಆರೋಪಿತಳು ನನ್ನ ನಾದಿನಿ, ಮೃತ 4ನೇ ಆರೋಪಿ ನನ್ನ ಗಂಡ, ಚಾಸಾ 1 ಪಿರ್ಯಾದುದಾರ ನನಗೆ ಗೊತ್ತು, ನನ್ನ ಗಂಡ 4 ವರ್ಷಗಳ ಹಿಂದೆಯೇ ಮೃತಹೊಂದಿರುತ್ತಾನೆ, ಆತನಿಗೆ ಪಾರ್ಶ್ವವಾಯು ಆಗಿತ್ತು ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**<u>ಪ್ರಶ್ನೆ 32.</u>** ಪ್ರಾ.ಸಾ.14 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ನನ್ನ ಗಂಡನಿಗೆ ಹಲವಾರು ಕಡೆಗೆ ಎಲ್ಲಾ ತರಹದ ಚಿಕಿತ್ಸೆಯನ್ನು ಕೊಡಿಸಿದರೂ ಸಹ ಅದರಿಂದ ಯಾವುದೇ ಸಹಾಯ ಆಗಿರುವುದಿಲ್ಲ, ಚಿಕಿತ್ಸೆ ಅಲ್ಲದೇ ಯಂತ್ರ, ತಂತ್ರದ ಉಪಾಯವನ್ನೂ ಸಹ 2ನೇ ಆರೋಪಿತಳಿಂದ ಮಾಡಿಸಿದ್ದೇವು, ಸನ್ 2017 ರ ಮಾರ್ಚ ಮಾಹೆಯಲ್ಲಿ ಸದರಿ ಯಂತ್ರ ಮತ್ತು ತಂತ್ರದ ಉಪಾಯವನ್ನು 2ನೇ ಆರೋಪಿಯಿಂದ ಮಾಡಿಸಿದೆವು, 2ನೇ ಆರೋಪಿ ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದು, ಅವಳನ್ನು 3ನೇ ಆರೋಪಿ ಆಟೋದಲ್ಲಿ ಕರೆದುಕೊಂಡು ಬಂದಿದ್ದು, 2ನೇ ಆರೋಪಿ ಬರುವಾಗ ಹೂ, ನಿಂಬೆಹಣ್ಣು, ಸುಗಂಧದ್ರವ್ಯ ಇತ್ಯಾದಿ ಪೂಜೆ ಸಾಮಾನುಗಳನ್ನು ತೆಗೆದುಕೊಂಡು ಬೆಳಿಗ್ಗೆ 10 ಗಂಟೆಯ ಸಮಯದಲ್ಲಿ ಬಂದಿದ್ದು, ನನ್ನ ಮಾವ ಅಬ್ದುಲ್ ಶುಕೋರ್ ರವರ ಆಸ್ಥಾನದಲ್ಲಿ ಪೂಜೆ ಮಾಡಿಸಿದ್ದು, ಆ ಸಮಯದಲ್ಲಿ ನಾನು, 1 ರಿಂದ 3ನೇ ಆರೋಪಿ ಮತ್ತು ಶಬಾಜ್ ಕಲಂದರ್ ಇದ್ದೇವು ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**<u>ಪ್ರಶ್ನೆ 33.</u>** ಪ್ರಾ.ಸಾ.14 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ಪೂಜೆ ಸುಮಾರು ಅರ್ಧ ಗಂಟೆಯ ಕಾಲ ನಡೆದಿದ್ದು, ಪೂಜೆ ಎಂದರೆ ಸದರಿ ಜಾಗದಲ್ಲಿ ನಿಂಬೆಹಣ್ಣುಗಳನ್ನು ನಿವಾಳಿಸಿ ಕೊಯ್ದುದ್ದಲ್ಲದೇ ಅಲ್ಲಿ ತಂದಿದ್ದ ಸಾಮಾನುಗಳನ್ನು ಸಹ ಕೊಯ್ದಿದ್ದು, ಪೂಜೆಯ ಪ್ರಾರಂಭದಿಂದ ಮುಕ್ತಾಯದವರೆಗೆ ನಾನು ಅವರ ಜೊತೆಗೇನೆ ಇದ್ದೇನು ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**<u>ಪ್ರಶ್ನೆ 34.</u>** ಪ್ರಾ.ಸಾ.15 ಗೌಸ್ ಖಾನ್ ರವರು ತಮ್ಮ ನುಡಿ ಸಾಕ್ಷ್ಯದಲ್ಲಿ, ಈಗ ಸುಮಾರು 7-8 ವರ್ಷಗಳ ಹಿಂದೆ ನಾನು ಬೆಂಗಳೂರಿನಲ್ಲಿ ಆಟೋ ನಡೆಸುತ್ತಿದ್ದೆ, 2 ಮತ್ತು 3ನೇ ಆರೋಪಿ ನನ್ನ ಮನೆಯ ಹತ್ತಿರ ಇದ್ದುದ್ದರಿಂದ ನನಗೆ ಗೊತ್ತು, 2ನೇ ಆರೋಪಿ ದೃಷ್ಟಿ ತೆಗೆಯುವ ಕೆಲಸ ಮಾಡುತ್ತಿದ್ದಳು, ನಾನು ಆಟೋದಲ್ಲಿ 2ನೇ ಮತ್ತು 3ನೇ ಆರೋಪಿಯನ್ನು ಬೆಂಗಳೂರಿನ ಗುಡ್ಡದಹಳ್ಳಿಯಿಂದ ಮಾಗಡಿಯಲ್ಲಿನ 1ನೇ ಆರೋಪಿಯ ಮನೆಗೆ ಕರೆದುಕೊಂಡು ಬಂದಿದ್ದು, ಅಲ್ಲಿ 1ನೇ ಆರೋಪಿ ತಮ್ಮನಿಗೆ ಕಾಯಿಲೆಯಾಗಿದ್ದರಿಂದ ಆತನಿಗೆ ದೃಷ್ಟಿ ತೆಗೆಯಿಸಿಕೊಂಡು ಬರೋಣ ಎಂದು ಹೇಳಿದ್ದರಿಂದ 2 ರಿಂದ 4 ಆರೋಪಿಗಳಿಗೆ ಮಧ್ಯಾಹ್ನ ಸುಮಾರು 12-12.30 ರ ಸಮಯದಲ್ಲಿ ಒಂದು ಖಾಲಿ ಜಾಗಕ್ಕೆ ಕರೆದುಕೊಂಡು ಹೋಗಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**<u>ಪ್ರಶ್ನೆ 35.</u>** ಪ್ರಾ.ಸಾ.15 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ಸದರಿ ಖಾಲಿ ಜಾಗದಲ್ಲಿ ಸುಮಾರು 20-30 ನಿಮಿಷಗಳ ಕಾಲ ದೃಷ್ಟಿ ತೆಗೆಯುವ ಕೆಲಸ ಮಾಡಿದ್ದು, ಆ ಸಮಯದಲ್ಲಿ ನಾನು ಸಹ ಅಲ್ಲಿಯೇ ಇದ್ದು, ಪೂಜೆ ಆದ ನಂತರ ಪುನಃ ಅವರನ್ನು ಕರೆದುಕೊಂಡು ಅವರ ಮನೆಗೆ ಬಿಟ್ಟಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**ಪ್ರಶ್ನೆ 36.** ಪ್ರಾ.ಸಾ.16 ಅರಣ್ಯ ರಕ್ಷಕ ಮಹೇಶ್ ಎ.ಸಿ. ರವರು ತಮ್ಮ ನುಡಿ ಸಾಕ್ಷ್ಯದಲ್ಲಿ, ದಿನಾಂಕ 08.03.2017 ರಂದು ನಮ್ಮ ಮೇಲಾಧಿಕಾರಿಗಳು ಯಾವುದೋ ಒಂದು ಅಪರಾಧ ಕೃತ್ಯವಾಗಿದ್ದು, ಅದರ ತನಿಖೆಗೆ ಸಹಕರಿಸಲು ಹೇಳಿ ನನಗೆ ಮತ್ತು ಚಾಸಾ 23 ಇವರಿಗೆ ಮಾಗಡಿಯ ಸಿಪಿಐರವರ ಕಛೇರಿಗೆ ಹೋಗಲು ತಿಳಿಸಿದ್ದರಿಂದ ಆ ಪ್ರಕಾರ ಬೆಳಿಗ್ಗೆ ಸುಮಾರು 9 ಗಂಟೆಯ ಸಮಯದಲ್ಲಿ ನಾವು ಮಾಗಡಿಯ ಸಿಪಿಐರವರ ಕಛೇರಿಗೆ ಹೋಗಿದ್ದು, ಆಗ ಅಲ್ಲಿ ಸಿಪಿಐರವರು 1ನೇ ಆರೋಪಿಯನ್ನು ನಮಗೆ ತೋರಿಸಿದ್ದು, ಆತನನ್ನು ಈ ದಿನ ನ್ಯಾಯಾಲಯದಲ್ಲಿ ನೋಡಿ ಗುರುತಿಸುತ್ತಿದ್ದೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**ಪ್ರಶ್ನೆ 37.** ಪ್ರಾ.ಸಾ.16 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ನಂತರ ನನಗೆ, ಚಾಸಾ 23 ರವರಿಗೆ ಪೊಲೀಸ್ ಜೀಪ್‌ನಲ್ಲಿ 1ನೇ ಆರೋಪಿಯ ತೋರಿಕೆಯ ಮೇರೆಗೆ ಹೊಸಹಳ್ಳಿ ರಸ್ತೆಯ ಎಡಭಾಗಕ್ಕೆ ಮುಸಲ್ಮಾನರು ಪೂಜೆ ಮಾಡುವ ಆಸ್ಥಾನದ ಸ್ಥಳದಲ್ಲಿ ಒಂದು ಮನೆಯಿದ್ದು, ಅದರ ಹಿಂಭಾಗದಲ್ಲಿ ಭೇಟಿ ನೀಡಿ ಕಲ್ಲಿನಿಂದ ಕಟ್ಟಿದ್ದ ಜಗುಲಿಯ ಮೇಲೆ ಕೊಲೆ ಮಾಡಿದ ಜಾಗ ಮತ್ತು ಮನೆಯ ಪಕ್ಕದಲ್ಲಿಯೇ ಪೂಜೆ ಮಾಡಿದ ಜಾಗ ಮತ್ತು ಕೊಲೆ ಮಾಡಿದ ಮೇಲೆ ಹಳ್ಳದ ಹತ್ತಿರ ಶವ ಬಿಸಾಕಿದ ಜಾಗ ಎಂದು ಹೇಳಿದ್ದರ ಮೇರೆಗೆ ಪೊಲೀಸರು ಬೆಳಿಗ್ಗೆ 10 ರಿಂದ 11 ಗಂಟೆಯವರೆಗೆ ನಿಶಾನೆ ಪಿ 15 ಸ್ಥಳ

ಪಂಚನಾಮೆಯನ್ನು ಮಾಡಿ ಅದರ ಮೇಲೆ ನಮ್ಮ ಸಹಿಯನ್ನು ಪಡೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**<u>ಪ್ರಶ್ನೆ 38.</u>** ಪ್ರಾ.ಸಾ.16 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ತದನಂತರ 1ನೇ ಆರೋಪಿ ನಮ್ಮೆಲ್ಲರನ್ನು ತನ್ನ ಮನೆಯ ಬಳಿ ಕರೆದುಕೊಂಡು ಹೋಗಿ ತನ್ನ ಮನೆಯ ಆವರಣದಲ್ಲಿ ನಿಲ್ಲಿಸಿದ್ದ ಟಿವಿಎಸ್ ಎಕ್ಸ್‌ಎಲ್ ದ್ವಿಚಕ್ರ ವಾಹನ ನಂ.ಕೆಎ-42-ಜೆ-4757 ತೋರಿಸಿ ಕೃತ್ಯಕ್ಕೆ ಬಳಸಿರುವುದಾಗಿ ಹೇಳಿ ತನ್ನ ಮನೆಯ ಒಳಗೆ ಕರೆದುಕೊಂಡು ಹೋಗಿ ಒಂದು ಮೂಲೆಯಲ್ಲಿದ್ದ ಒಂದು ಚೀಲನ್ನು ಕೃತ್ಯಕ್ಕೆ ಬಳಸಿಕೊಂಡಿದ್ದಾಗಿ ಹೇಳಿ ಸದರಿ ಜಾಗವನ್ನು ತೋರಿಸಿದ್ದರ ಮೇರೆಗೆ ಪೊಲೀಸರು ಅದಕ್ಕೆ ಸಂಬಂಧಿಸಿದಂತೆ ಬೆಳಿಗ್ಗೆ 11.30 ರಿಂದ ಮಧ್ಯಾಹ್ನ 12.10 ರವರೆಗೆ ನಿಶಾನೆ ಪಿ 16 ಪಂಚನಾಮೆಯನ್ನು ಮಾಡಿ ಅದರ ಮೇಲೆ ನಮ್ಮ ಸಹಿಯನ್ನು ಪಡೆದು, ದ್ವಿಚಕ್ರ ವಾಹವನ್ನು ನಿಶಾನೆ ಪಿ 18 ರಂತೆ ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**<u>ಪ್ರಶ್ನೆ 39.</u>** ಪ್ರಾ.ಸಾ.16 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ತದನಂತರ ಅಲ್ಲಿಂದ 1ನೇ ಆರೋಪಿ ಮೃತ ಆಯೀಷಾಳನ್ನು ಅಪಹರಣ ಮಾಡಿರುವ ಜಾಗವೆಂದು ಸುನಕಲ್ ಬೀದಿಯಲ್ಲಿ ಇರುವ ಸದಾನಂದ ಆಚಾರ್ ರವರ ಮನೆಯ ಮುಂದಿನ

ಜಾಗವೆಂದು ತೋರಿಸಿದ ಮೇರೆಗೆ ಪೊಲೀಸರು ಮಧ್ಯಾಹ್ನ 12.30 ರಿಂದ 1.15 ರವರೆಗೆ ನಿಶಾನೆ ಪಿ 17 ಸ್ಥಳ ಪಂಚನಾಮೆಯನ್ನು ಮಾಡಿ ಅದರ ಮೇಲೆ ನಮ್ಮ ಸಹಿಯನ್ನು ಪಡೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**ಪ್ರಶ್ನೆ 40.** ಪ್ರಾ.ಸಾ.17 ಪೊಲೀಸ್ ಪೇದೆ ಅರುಣ್ ಕುಮಾರ್ ರವರು ತಮ್ಮ ನುಡಿ ಸಾಕ್ಷ್ಯದಲ್ಲಿ, ದಿನಾಂಕ 07.03.2017 ರಂದು ನಮ್ಮ ಠಾಣಾ ಪ್ರಕರಣ ಸಂಖ್ಯೆ 30/2017 ಕ್ಕೆ ಸಂಬಂಧಿಸಿದ ಆರೋಪಿಗಳನ್ನು ಶೋಧಿಸಿ ತಂದು ಹಾಜರುಪಡಿಸುವಂತೆ ಚಾಸಾ.36 ರವರು, ನನಗೆ, ಚಾಸಾ 30, 31 ಮತ್ತು 33 ರವರಿಗೆ ನೇಮಿಸಿದ್ದರ ಪ್ರಕಾರ ಅದೇ ದಿನ 1ನೇ ಆರೋಪಿ ಮೊಹಮ್ಮದ್ ವಾಸಿಲ್ ಮತ್ತು ಸಂಘರ್ಷಕ್ಕೊಳಗಾಗಿದ್ದ ಮೊಹಮ್ಮದ್ ಶಾಬಾಜ್ ಕಲಂದರ್ ಇವರನ್ನು ಕರೆತಂದು ಬೆಳಿಗ್ಗೆ 8.30ರ ಸಮಯದಲ್ಲಿ ಚಾಸಾ 36 ರವರ ಮುಂದೆ ಹಾಜರುಪಡಿಸಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**ಪ್ರಶ್ನೆ 41.** ಪ್ರಾ.ಸಾ.17 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ತದನಂತರ, 2 ಮತ್ತು 3ನೇ ಆರೋಪಿಗಳನ್ನು ಗೋರಿಪಾಳ್ಯದ ಹತ್ತಿರ ಇರುತ್ತಾರೆ ಎಂದು ಬಂದ ಖಚಿತವಾದ ಮಾಹಿತಿಯ ಮೇರೆಗೆ ಪುನಃ ನಾನು, ಚಾಸಾ 30, 31 ಮತ್ತು 33 ಅಲ್ಲಿನ

ಬಸ್ ಸ್ಟ್ಯಾಂಡ್‌ಗೆ ಹೋಗಿ ಅಲ್ಲಿದ್ದ 2ನೇ ಮತ್ತು 3ನೇ ಆರೋಪಿತರನ್ನು ಹಿಡಿದುಕೊಂಡು ತಂದು ಚಾಸಾ 36 ಇವರ ಮುಂದೆ ಬೆಳಿಗ್ಗೆ 10.30 ರ ಸಮಯದಲ್ಲಿ ಹಾಜರುಪಡಿಸಿದ್ದು, ನಾವು ಆ ದಿನ ತಂದು ಹಾಜರುಪಡಿಸಿದ್ದ 1 ರಿಂದ 3ನೇ ಆರೋಪಿಗಳನ್ನು ಈ ದಿನ ನ್ಯಾಯಾಲಯದಲ್ಲಿ ನೋಡಿ ಗುರುತಿಸುತ್ತಿದ್ದೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**ಪ್ರಶ್ನೆ 42.** ಪ್ರಾ.ಸಾ.17 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ಕೃತ್ಯಕ್ಕೆ ಬಳಸಿದ್ದ ಆಟೋ ರಿಕ್ಷಾ ಗೋರಿಪಾಳ್ಯದ ಆಟೋ ಸ್ಟ್ಯಾಂಡ್‌ನಲ್ಲಿ ಇರುತ್ತದೆ ಎಂದು ದೊರೆತ ಮಾಹಿತಿಯ ಮೇರೆಗೆ ನಾನು ಮತ್ತು ಚಾಸಾ 33 ಅದೇ ದಿನ ಹೋಗಿ ಸದರಿ ಆಟೋ ರಿಕ್ಷಾ ನಂ.ಕೆಎ-03-ಎ-7015 ನ್ನು ನಿಶಾನೆ ಪಿ 21 ರಿಂದ 24 ರಂತೆ ನಮ್ಮ ವಶಕ್ಕೆ ಪಡೆದು ತಂದು ಚಾಸಾ 36 ಇವರ ಮುಂದೆ ಹಾಜರುಪಡಿಸಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**ಪ್ರಶ್ನೆ 43.** ಪ್ರಾ.ಸಾ.18 ಪೊಲೀಸ್ ಪೇದೆ ದರ್ಶನ್ ಎಂ.ಎಸ್. ರವರು ತಮ್ಮ ನುಡಿ ಸಾಕ್ಷ್ಯದಲ್ಲಿ, ದಿನಾಂಕ 02.03.2017 ರಂದು ಮಾಗಡಿ ಪೊಲೀಸ್ ಠಾಣೆಯ ಅಪರಾಧ ಸಂಖ್ಯೆ 40/2017 ಕ್ಕೆ ಸಂಬಂಧಿಸಿದಂತೆ ಠಾಣೆಯಲ್ಲಿ ನನಗೆ ಮೂಲ ಪಿರ್ಯಾದಿ ಮತ್ತು

ಪ್ರಥಮ ವರ್ತಮಾನ ವರದಿಯನ್ನು ಬೆಳಿಗ್ಗೆ 9.30 ರ ಸಮಯದಲ್ಲಿ ನೀಡಿದ್ದು, ಅವುಗಳನ್ನು ಅದೇ ದಿನ ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ನ್ಯಾಯಾಲಯಕ್ಕೆ ತಂದು ಒಪ್ಪಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

<u>**ಪ್ರಶ್ನೆ 44.**</u> ಪ್ರಾ.ಸಾ.19 ಡಾ.ಜಗದೀಶ್ ರವರು ತಮ್ಮ ನುಡಿ ಸಾಕ್ಷ್ಯದಲ್ಲಿ, ಡಾ. ನಿಸಾರ್ ಅಹಮದ್ ಅವರು ರಾಜರಾಜೇಶ್ವರಿ ಆಸ್ಪತ್ರೆಯಲ್ಲಿ ದಿನಾಂಕ 22.11.2019 ರವರೆಗೆ ವೈದ್ಯರಾಗಿ ಕರ್ತವ್ಯ ನಿರ್ವಹಿಸಿದ್ದು, ದಿನಾಂಕ 17.09.2021 ರಂದು ವೈದ್ಯರಾದ ನಿಸಾರ್ ಅಹಮದ್ ಅವರು ಮರಣ ಹೊಂದಿದ್ದು, ತಾನು ಅವರ ಜೊತೆ ಕೆಲಸ ಮಾಡಿ, ಅವರ ಸಹಿಯ ಪರಿಚಯ ತನಗಿದೆ, ದಿನಾಂಕ 03.03.2017 ರ ಶವಪರೀಕ್ಷಾ ವರದಿ-ನಿಶಾನೆ ಪಿ 19ರಲ್ಲಿ ಇರುವಂತಹ ಸಹಿ ಡಾ.ನಿಸಾರ್ ಅಹಮದ್ ಅವರದ್ದಾಗಿರುತ್ತದೆ ಮತ್ತು ದಿನಾಂಕ 17.04.2017 ರ ಮಾಗಡಿ ವೃತ್ತ ನಿರೀಕ್ಷಕರಿಗೆ ನಮ್ಮ ಆಸ್ಪತ್ರೆಯಿಂದ ನೀಡಿರುವಂತಹ ಪತ್ರ ನಿಶಾನೆ ಪಿ 20 ರಲ್ಲಿ ಇರುವಂತಹ ಸಹಿ ಸಹ ಡಾ. ನಿಸಾರ್ ಅಹಮದ್ ಅವರದ್ದಾಗಿರುತ್ತದೆ, ಶವಪರೀಕ್ಷೆ ನಡೆಸಿದ ನಂತರ ವೈದ್ಯರು ನಿಶಾನೆಪಿ 19 ವರದಿಯನ್ನು ನೀಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**ಪ್ರಶ್ನೆ 45.** ಪ್ರಾ.ಸಾ.20 ಪಿಎಸ್‌ಐ ಮಂಜುನಾಥ್ ಬಿ.ಆರ್. ರವರು ತಮ್ಮ ನುಡಿ ಸಾಕ್ಷ್ಯದಲ್ಲಿ, ದಿನಾಂಕ 02.03.2017 ರಂದು ಬೆಳಿಗ್ಗೆ 9 ಗಂಟೆ ಸಮಯದಲ್ಲಿ ಮಹಮದ್ ನೂರ್ ಉಲ್ಲಾ ಎಂಬ ವ್ಯಕ್ತಿ ಠಾಣೆಗೆ ಹಾಜರಾಗಿ ನೀಡಿದಂತಹ ನಿಶಾನೆ ಪಿ 1 ದೂರನ್ನು ಸ್ವೀಕರಿಸಿಕೊಂಡು ಗುನ್ನೆಯನ್ನು ಕ್ರೈಂ ನಂ.40/2017 ರಲ್ಲಿ ದಾಖಲಿಸಿಕೊಂಡು, ಸದರಿ ದೂರಿಗೆ ಸಂಬಂಧಿಸಿದ ಪ್ರಥಮ ವರ್ತಮಾನ ಮಾಹಿತಿಯನ್ನು ನಿಶಾನೆ ಪಿ 25 ರಂತೆ ದಾಖಲು ಮಾಡಿಕೊಂಡು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**ಪ್ರಶ್ನೆ 46.** ಪ್ರಾ.ಸಾ.20 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ಅದೇ ದಿನ ಕೃತ್ಯದ ಸ್ಥಳಕ್ಕೆ ಭೇಟಿ ನೀಡಿ ಪಿರ್ಯಾದಿ ತೋರಿಸಿದಂತಹ ಸ್ಥಳದಲ್ಲಿ ಬೆಳಿಗ್ಗೆ 11.45 ರಿಂದ 12.30 ರ ಸಮಯದಲ್ಲಿ ಪಂಚರಾದ ಇಲಿಯಾಸ್ ಖಾನ್ ಮತ್ತು ಮಹಮದ್ ಜಿಯಾ ರವರ ಅವರ ಸಮಕ್ಷಮದಲ್ಲಿ ನಿಶಾನೆ ಪಿ 5 ರ ಮಹಜರ್ ತಯಾರಿಸಲಾಗಿದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**ಪ್ರಶ್ನೆ 47.** ಪ್ರಾ.ಸಾ.20 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ದಿನಾಂಕ 03.03.2017 ರಂದು ಮಾಗಡಿ ನಗರದಲ್ಲಿ ಮಗುವಿನ ಮೃತ ದೇಹವೊಂದು ಇದೆ

ಎಂದು ಮಾಹಿತಿ ಬಂದಿದ್ದರನ್ವಯ ಸಂಜೆ ಸುಮಾರು 4.30 ರ ಸಮಯದಲ್ಲಿ ಸ್ಥಳಕ್ಕೆ ಹೋದಾಗ ಪಿರ್ಯಾದುದಾರುನಾದ ಮಹಮದ್ ನೂರ್ ಉಲ್ಲಾ ಅಲ್ಲಿ ಬಂದಿದ್ದು, ಆತ ಸದರಿ ಮೃತ ದೇಹವನ್ನು ನೋಡಿ ಅದು ತನ್ನ ಮಗು ಎಂದು ಗುರುತಿಸಿ ಮತ್ತೊಂದು ದೂರನ್ನು ನಿಶಾನೆ ಪಿ 2 ರಂತೆ ನೀಡಿದ್ದು, ಅದನ್ನು ಸ್ವೀಕರಿಸಿ ಮಾನ್ಯ ನ್ಯಾಯಾಲಯಕ್ಕೆ ಈಗಾಗಲೇ ಸಲ್ಲಿಸಿದ್ದ ಪ್ರಥಮ ವರ್ತಮಾನ ಕ್ಕೆ ಸಂಬಂಧಿಸಿದಂತೆ ಐಪಿಸಿ ಕಲಂ.363 ರ ಜೊತೆ 302, 201 ಐಪಿಸಿ ನ್ನು ಅಳವಡಿಸಿಕೊಳ್ಳಲು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**<u>ಪ್ರಶ್ನೆ 48.</u>** ಪ್ರಾ.ಸಾ.20 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ವೃತ್ತ ನಿರೀಕ್ಷಕರಾದ ನಂದೀಶ್ ಚಾಸಾ 36 ರವರು ಈಗ ಮರಣ ಹೊಂದಿದ್ದು, ನನ್ನ ಕರ್ತವ್ಯದ ಸಮಯದಲ್ಲಿ ಅವರ ಸಹಿಗಳನ್ನು ನಾನು ನೋಡಿದ್ದು, ಅವುಗಳನ್ನು ನೋಡಿದರೆ ಗುರುತಿಸಬಲ್ಲೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**<u>ಪ್ರಶ್ನೆ 49.</u>** ಪ್ರಾ.ಸಾ.20 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ನಿಶಾನೆ ಪಿ 3, ನಿಶಾನೆ ಪಿ 4, ನಿಶಾನೆ ಪಿ 9, ನಿಶಾನೆ ಪಿ 10, ನಿಶಾನೆ ಪಿ 11, ನಿಶಾನೆ ಪಿ 15, ನಿಶಾನೆ ಪಿ

16, ನಿಶಾನೆ ಪಿ 17, ನಿಶಾನೆ ಪಿ 19 ಮತ್ತು ನಿಶಾನೆ ಪಿ 20 ದಾಖಲೆಗಳಲ್ಲಿರುವ ಸಹಿ ಚಾಸಾ 36 ಅವರದ್ದಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**<u>ಪ್ರಶ್ನೆ 50.</u>** ಬೇರೆ ಏನಾದರೂ ಹೇಳುವುದು ಇದೆಯೇ?

ಉತ್ತರಃ

**<u>ಪ್ರಶ್ನೆ 51.</u>** ನಿಮ್ಮ ಪರ ಸಾಕ್ಷಿ ವಿಚಾರಣೆ ಇದೆಯೇ?

ಉತ್ತರಃ

(ಈ ಮೇಲಿನ ಪ್ರಶ್ನೆಗಳನ್ನು ಆರೋಪಿಗಳಿಗೆ ಕನ್ನಡದಲ್ಲಿ ಓದಿ ಹೇಳಲಾಗಿ ಆರೋಪಿಗಳು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಗಿದೆ ಎಂದು ದೃಢೀಕರಿಸಲಾಗಿದೆ)

**(ಎಂ. ಪಂಚಾಕ್ಷರಿ)**
**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

**ದಿನಾಂಕ 03.08.2026.**